ಗುರುತಿಸಿಕೊಳ್ಳುವಿಕೆಯಿಂದ ಹೊಣೆಗಾರಿಕೆ ಹೊಮ್ಮುತ್ತದೆ

ಅರ್ಚನಾ ಆರ್.

ಮಕ್ಕಳು ಶಾಲೆಗೆ ಬರುವುದು ಶಿಕ್ಷಕರಂಥ ವಯಸ್ಕರಿಂದ ಬೋಧಿಸಲ್ಪಡಲಾಗಲೀ ಅಥವಾ 'ರೂಪಿಸಲ್ಪಡಲಾಗಲೀ' ಅಲ್ಲ; ಮಕ್ಕಳು ಶಾಲೆಯ ದೈನಂದಿನ ಪ್ರಕ್ರಿಯೆಗಳನ್ನು ನಿರ್ಧರಿಸುವ, ಸಂಘಟಿಸುವ ಹಾಗು ಅನುಷ್ಠಾನಕ್ಕೆ ತರುವ ಕ್ರಿಯೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದು ನಂಬುವ ಕಾರಣಕ್ಕೆ ನಾವು ಹಾಗೆಂದು ಆಗ್ರಹಿಸುತ್ತೇವೆ. ಶಾಲೆಯಲ್ಲಿ ಮಗುವಿನ ಸ್ಥಾನವು ಕೇವಲ ವೀಕ್ಷಕ ಅಥವಾ ಸ್ವೀಕರಿಸುವವನಷ್ಟೇ ಆಗಿರದೆ ಸಕ್ರಿಯವಾಗಿ ಭಾಗವಹಿಸುವುದೂ ಆಗಿದೆ ಈ ಪಾಲ್ಗೊಳ್ಳುವಿಕೆಯು ಅಡೆ-ತಡೆಗಳಿಲ್ಲದೆ ಸಾಗಲು ಅವರ ಅಗತ್ಯಗಳನ್ನು ಮಂಡಿಸಲು ಅವರಿಗೊಂದು ಧ್ವನಿ ಹಾಗು ವೇದಿಕೆಯು ಅತ್ಯಗತ್ಯ. ಮಕ್ಕಳಿಗೆ ನಾವು ಕಲ್ಪಿಸಿಕೊಡುವ ಇಂತಹ ವೇದಿಕೆ ಹಾಗು ಕರ್ತೃತ್ವದ ಪ್ರಮಾಣ ಶಾಲೆಯಿಂದ ಶಾಲೆಗೆ ಭಿನ್ನವಾಗಿರುತ್ತದೆ. ಉದಾಹರಣೆಗೆ, ತೆತ್ಸುಕೋ ಕುರೊಯಾನಗಿ ಅಥವಾ ತೋತೋ ಚಾನ್ (Tetsuko Kuroyanagi or Totto-chan) ಹಾಜರಾದ ಶಾಲೆಯ ಮುಖ್ಯಶಿಕ್ಷಕರು ಅಲ್ಲಿನ ಕಟ್ಟುಪಾಡುಗಳನ್ನು ರೂಪಿಸುವ ಹೊಣೆಹೊತ್ತಿದ್ದರೂ, ಅವರು ಮಕ್ಕಳಿಗೆ ಶಾಲಾ ವಾತಾವರಣದಲ್ಲಿ ತಾವು ತಾವಾಗಿರಲು ಸಂಪೂರ್ಣ ಸ್ವಾತಂತ್ರ್ಯ ನೀಡಿಯೇ ಅದನ್ನು ಸಾಧಿಸಿದ್ದರು ಎಂದು ನಮಗಿಂದು ತಿಳಿದಿದೆ. ಎ.ಎಸ್.ನೀಲ್ ii ಅವರು ನಡೆಸುತ್ತಿದ್ದ ಸಮ್ಮರ್ ಹಿಲ್‌ನಂತಹ ಶಾಲೆಯಲ್ಲಿ ಮಕ್ಕಳು ತಮ್ಮದೇ ಆದ ಪ್ರಜಾಸತ್ತಾತ್ಮಕ ನೆಲೆಯನ್ನು ರೂಪಿಸಿಕೊಳ್ಳಲು ಪಾಲ್ಗೊಳ್ಳುವ ಕಲ್ಪನೆಗೆ ಇನ್ನೂ ಹೆಚ್ಚಿನ ಔಪಚಾರಿಕ ಹಾಗು ಮಹತ್ವಪೂರ್ಣ ಶಕ್ತಿ ವಿನಿಯೋಗವಾಗಿದೆ. ಕಾಲಕಾಲಕ್ಕೆ ತಕ್ಕಂತೆ 'ಮಕ್ಕಳ ಸರ್ಕಾರ' ಎಂಬುದರ ಅರ್ಥ, ಬದಲಾದರೂ, ಅವರಿಗೆ ಅದು ತಮಗೆ ಸಂಬಂಧಿಸಿದ್ದಾಗಿದೆ ಎಂಬ ಅರಿವಿರುವುದು ತುಂಬಾ ಮುಖ್ಯ ಹಾಗು ತಮಗೆ ಮುಖ್ಯವೆನಿಸಿದ ವಿಚಾರಗಳ ಬಗ್ಗೆ ತಾವು ವಾದ ಮಾಡಬಹುದು ಎಂಬುದನ್ನು ನೀಲ್ ಬಲವಾಗಿ ಪ್ರತಿಪಾದಿಸುತ್ತಾರೆ. ಮಕ್ಕಳು ತಮ್ಮ ವಿಚಾರಗಳನ್ನು ಪ್ರತಿಪಾದಿಸುವ ವಿಷಯವಾಗಿ ನೀಲ್ ಅವರು ನೀಡುವ ಉದಾಹರಣೆಗಳ ಹರಹು, ಕಳ್ಳತನಕ್ಕೆ ಸೂಕ್ತ ದಂಡನೆಯ ವಿಷಯದಿಂದ ಹಿಡಿದು 12 ವರ್ಷಗಳಿಗಿಂತ ಕೆಳಪಟ್ಟವರ ಮೇಲೆ ಹೇರಲಾಗಿದ್ದ ಧೂಮಪಾನ ನಿಷೇಧವನ್ನು ತೆರವು ಮಾಡುವಂತೆ 8-9 ವಯಸ್ಸಿನ ಮಕ್ಕಳು ಮಂಡಿಸುವ ವಾದದವರೆಗೂ ಇದೆ.

ಹೊರಜಗತ್ತು ಯಾವುದನ್ನು ನಕಾರಾತ್ಮಕ ನಡೆ ಅಥವಾ ಎಲ್ಲೆ ಮೀರಿದ ನಡತೆ ಎನ್ನುತ್ತದೆಯೋ, ಅಂಥವುಗಳ ವಿಚಾರದಲ್ಲೂ ಮಕ್ಕಳದೇ ಅಂತಿಮ ನಿರ್ಧಾರ ಎಂದು ಸಮ್ಮರ್ ಹಿಲ್‌ನಂತಹ ಶಾಲೆಯಲ್ಲಿ ಪ್ರತಿಪಾದಿಸಲಾಗುತ್ತದೆ. ಈ ಶಾಲೆಯಲ್ಲಿ ಮಕ್ಕಳಿಗೆ ತಮ್ಮನ್ನು ಅಭಿವ್ಯಕ್ತಿಸಿಕೊಳ್ಳಲು ಮುಕ್ತ ಅವಕಾಶ ನೀಡಲಾಗಿದೆ; ಚರ್ಚಿಸಬೇಕಾದ ವಿಷಯಗಳನ್ನು ಅವರೇ ಆರಿಸಿಕೊಳ್ಳುತ್ತಾರೆ; ಅವರ ನಡುವೆ (ಅಥವಾ ಮುಖ್ಯಶಿಕ್ಷಕಿ-ಶಿಕ್ಷಕರು-ವಿದ್ಯಾರ್ಥಿಗಳ) ನಡುವೆ ಮೇಲು-ಕೀಳು ಎಂಬ ಯಾವುದೇ ಶ್ರೇಣಿಗಳಿರದೆ, ಉತ್ತಮವಾದ ವಾದದ ಆಧಾರದ ಮೇಲೆಯೇ ನಿಯಮಗಳು ರೂಪಿಸಲ್ಪಡುತ್ತವೆ ಎನ್ನುವುದು ಅಲ್ಲಿನ ಘಟನಾವಳಿಗಳ ವಿವರಣೆಯಿಂದ ನಮಗೆ ತಿಳಿದುಬರುತ್ತದೆ. ಈ ಪ್ರಕ್ರಿಯೆಯು ಯಶಸ್ವಿಯಾಗುವುದಕ್ಕೆ ಕಾರಣ ಮಕ್ಕಳು ಶಾಲೆಯ ಮೂಲಭೂತ ಆಲೋಚನೆಯನ್ನು (ಅನುಭವದ ಮೂಲಕ) ಅರಿಯುವಂತೆ ಶಾಲೆಯು ನೋಡಿಕೊಂಡಿರುವುದು. ಮಕ್ಕಳು ಮುಕ್ತವಾಗಿರಲು ಅವಕಾಶ ಮಾಡಿಕೊಟ್ಟು, ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯಾವುದೇ ವಿಷಯವು ಶಾಲೆಯ ತತ್ವಗಳಿಗೆ ವಿರುದ್ಧವಾಗಿದ್ದು, ಅದನ್ನು ಪ್ರಶ್ನಿಸಬಹುದಾಗಿದೆ ಎಂದು ಮಕ್ಕಳಿಗೆ ಇಲ್ಲಿ ಬೋಧಿಸಲಾಗಿದೆ.

ಶಾಲೆಯ ಚುನಾವಣಾ ದಿನ

ನನ್ನ ಅಸೋಸಿಯೇಟ್ ಕಾರ್ಯಕ್ರಮದ (Associate Programme) ಅಂಗವಾಗಿ ನಾನಾಗ ಯಾದಗಿರಿ ಜಿಲ್ಲೆಯ ಕಂಚಗರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡುತ್ತಿದ್ದೆ. ಈ ಶಾಲೆಗೆ ಹಳ್ಳಿಯ ಹಾಗು 'ತಾಂಡಾ'ದ (ಬುಡಕಟ್ಟು ಜನರ ಹಟ್ಟಿ) ವಿದ್ಯಾರ್ಥಿಗಳು ಬರುತ್ತಿದ್ದರು. ಯಾದಗಿರಿ ಜಿಲ್ಲೆಯಲ್ಲಿ ಸಾಧಾರಣವಾಗಿ ಎಲ್ಲಾ ಹಳ್ಳಿಗಳಲ್ಲಿಯೂ ಲಂಬಾಣಿ ಮಾತನಾಡುವ ಜನರ ಒಂದು ತಾಂಡಾ ಇರುತ್ತದೆ. ಇವು ಸಾಮಾನ್ಯವಾಗಿ ಹೆಚ್ಚು ಕಾಣದಂತಹ ದೂರದ ಸ್ಥಳಗಳಲ್ಲಿ, ಮುಖ್ಯರಸ್ತೆಗಳಿಂದ ಒಳಪ್ರದೇಶದಲ್ಲಿರುತ್ತದೆ.

ಶನಿವಾರ ಮಕ್ಕಳು ಶಾಲೆಯಲ್ಲಿ ಬೆಳಗಿನ ಪ್ರಾರ್ಥನೆಗೆಂದು ನೆರೆದಿದ್ದರು. ಹೊಸ ಶೈಕ್ಷಣಿಕ ವರ್ಷದ ನಾಯಕತ್ವದ ಸ್ಥಾನಗಳಿಗಾಗಿ ಚುನಾವಣೆ ನಡೆಯಬೇಕಿದ್ದು, ಶಾಲಾ ಆವರಣವನ್ನು ಸಂಪೂರ್ಣವಾಗಿ ಶುಚಿಗೊಳಿಸುವ ಕಾರ್ಯಕ್ರಮವೂ ಇತ್ತು. ಶುಚಿತ್ವ, ಕೈತೋಟ, ಗ್ರಂಥಾಲಯ, ಕ್ರೀಡೆ, ಇಂಗ್ಲಿಷ್, ಹಿಂದಿ ಮೊದಲಾದ ಶಾಲೆಯ ವಿವಿಧ ಕ್ಲಬ್‌ಗಳ ಹಾಗು ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರ ಪರಿಶೀಲನೆ ಇತ್ಯಾದಿ ಕಾರ್ಯಕ್ರಮಗಳ ಮೇಲುಸ್ತುವಾರಿ ಸ್ಥಾನಗಳಿಗೆ ಚುನಾವಣೆ ನಡೆಯುವುದಿತ್ತು. ವಿದ್ಯಾರ್ಥಿಗಳು ಮತ್ತು ಮಕ್ಕಳೊಡನೆ ಮಾತನಾಡುವಾಗ ಅಂದು ಗೈರುಹಾಜರಾಗಿದ್ದ ಮಕ್ಕಳ ವಿಷಯವಾಗಿ ಮಾದರಿಯೊಂದು ನನಗೆ ಗೋಚರವಾಯಿತು:

- ಏಳು ಮತ್ತು ಎಂಟನೇ ತರಗತಿಯ ಅನೇಕ ಹೆಣ್ಣುಮಕ್ಕಳು ಹಾಜರಿರಲಿಲ್ಲ.
- ತಾಂಡಾದಿಂದ ಬರಬೇಕಿದ್ದ ಅನೇಕ ಮಕ್ಕಳು ಬಂದಿರಲಿಲ್ಲ.

ತಾಂಡಾದಿಂದ ಬರಬೇಕಿದ್ದ ವಿದ್ಯಾರ್ಥಿಗಳ ಗೈರುಹಾಜರಿ ಅಂತಹ ಅಸಾಧಾರಣ ಸಂಗತಿಯೇನೂ ಅಲ್ಲ ಎಂದು ಶಾಲಾ ಮುಖ್ಯ ಶಿಕ್ಷಕಿ ನನಗೆ ತಿಳಿಸಿದರು. ಅವರು ಶಾಲಾ ಆವರಣವನ್ನು ಶುಚಿಗೊಳಿಸುವ ದಿನಗಳಂದು ಸದಾ ಶಾಲೆಯಿಂದ ಹೊರಗುಳಿಯುತ್ತಾರೆ. ಹಾಗೆಯೇ, ವಿದ್ಯಾರ್ಥಿನಿಯರ ಗೈರುಹಾಜರಿಯು ಒಂದೇ ಗುಂಪಿನ ವಿದ್ಯಾರ್ಥಿಗಳು ನಾಯಕತ್ವದ ಸ್ಥಾನಗಳಿಗೆ

ಚುನಾಯಿತರಾಗುತ್ತಾರೆ ಎಂಬುದಕ್ಕೆ ಸಂಬಂಧಿಸಿತ್ತು ಎಂಬುದನ್ನೂ ನಾನು ಕಂಡುಕೊಂಡೆ. ಈ ನಾಯಕತ್ವದ ಸ್ಥಾನಗಳೊಂದಿಗೆ ಬರುವ ಜನಪ್ರಿಯತೆಯನ್ನು ನಿಭಾಯಿಸುವಲ್ಲಿ ಕಂಡುಬರುವ ನಾಚಿಕೆ, ಆತಂಕದ ಭಾವನೆಗಳು ಹದಿಹರೆಯದವರಲ್ಲಿ ಸಾಮಾನ್ಯವಾಗಿದ್ದರೂ, ಕೀಳರಿಮೆಗೆ ತುತ್ತಾಗುವುದು, ನಿರ್ಲಕ್ಷ್ಯಕ್ಕೆ ಒಳಗಾಗುವುದು ಹುಡುಗಿಯರೇ ಜಾಸ್ತಿ ಎಂಬುದನ್ನು ಸ್ಪಷ್ಟವಾಗಿ ನೋಡುವುದಕ್ಕೆ ಕೆಳಗಿನ ಅಂಶಗಳು ಕಾರಣವಾಗಿದ್ದವು :

ಹಲವು ಸ್ಥಾನಗಳಿಗೆ ಹುಡುಗ, ಹುಡುಗಿಯರಿಬ್ಬರನ್ನೂ ನೇಮಿಸುವುದು ಅವಶ್ಯಕವಾಗಿತ್ತು. ಆದರೆ ಇದು ನಾಮಕಾವಾಸ್ತೆ ನಿಯಮವಾಗಿತ್ತು ಎಂದು ತಿಳಿದುಬಂತು. ಸ್ಥಾನಕ್ಕೆ ಅನುಗುಣವಾಗಿ ಹೊಣೆಗಾರಿಕೆಗಳು ಹುಡುಗ ಅಥವಾ ಹುಡುಗಿಯ ಬೆನ್ನೇರುತ್ತಿದ್ದವು. ಉದಾಹರಣೆಗೆ, ಕ್ರೀಡೆ ಹಾಗು ತೋಟಗಾರಿಕೆಗೆ ಸಂಬಂಧಿಸಿದ ಕಾರ್ಯಕ್ರಮಗಳ ಆಯೋಜನೆ ಮತ್ತು ಮುಂದಾಳತ್ವಗಳು ಹುಡುಗರನ್ನು ಅರಸಿಕೊಂಡು ಬಂದರೆ, ಮಧ್ಯಾಹ್ನದ ಬಿಸಿಯೂಟ, ಶುಚಿತ್ವದಂತಹ ದಿನನಿತ್ಯದ ಕರ್ತವ್ಯಗಳ ನಿರ್ವಹಣೆ ಹೆಣ್ಣುಮಕ್ಕಳಿಗೆ ಮೀಸಲಾಗಿತ್ತು. ವಿವಿಧ ಕ್ಲಬ್‌ಗಳ ನಾಯಕತ್ವದ ಸ್ಥಾನದಂತಹ ಉಳಿದ ಸ್ಥಾನಗಳು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದವಾಗಿದ್ದು, ಆಯ್ದ ಕೆಲವು ವಿದ್ಯಾರ್ಥಿಗಳನ್ನು ಮಾತ್ರ ಇಂತಹ ಸ್ಥಾನಗಳಿಗೆ ಆರಿಸಲಾಗುತ್ತಿತ್ತು.

ಮೈಮುರಿದು ದುಡಿಯವ ಹುಡುಗರು ಶಾಲೆಗೆ ಗಿಡಗಳನ್ನು ತರುತ್ತಿದ್ದರು, ಕ್ರೀಡೆಯಲ್ಲಿ ಆಸಕ್ತಿ ಇದ್ದ ಹುಡುಗರು ಆ ವಿಭಾಗದ ನಾಯಕರಾಗಬಹುದಿತ್ತು. ಹುಡುಗಿಯರ ವಿಚಾರಕ್ಕೆ ಬಂದಾಗ, ಏಳು ಮತ್ತು ಎಂಟನೇ ತರಗತಿಯ ನಾಲ್ಕರಿಂದ–ಆರು ಮಕ್ಕಳ ಒಂದೇ ಗುಂಪು ಎಲ್ಲಾ ಸ್ಥಾನಗಳಿಗೂ ಸದಾ ಆಯ್ಕೆಯಾಗುತ್ತಿದ್ದರು. ಏಕೆಂದರೆ, ಪಾಠಗಳಲ್ಲಿ ಮುಂದಿದ್ದವರು ಹೊಣೆಗಾರರಾಗಲು ಸಮರ್ಥರಿದ್ದು, ಶಾಲೆಯ ದಿನನಿತ್ಯದ ಕಾರ್ಯಗಳ ಮೇಲ್ವಿಚಾರಣೆ ಮಾಡಬಲ್ಲರು ಎಂಬುದು ಶಿಕ್ಷಕರ ನಂಬುಗೆಯಾಗಿತ್ತು.

ವಲಸಿಗ ಮಕ್ಕಳು

ಲಂಬಾಣಿ ಮಾತನಾಡುವ ತಾಂಡಾ ವಿದ್ಯಾರ್ಥಿಗಳ ಗೈರುಹಾಜರಿ ಚಿಂತೆಯ ವಿಷಯವಾಗಿತ್ತು. ಕನ್ನಡ ಮಾಧ್ಯಮದಲ್ಲಿ ಕಲಿಯಲು ಹೆಣಗುವುದರಿಂದಾಗಿ ಅವರ ಶೈಕ್ಷಣಿಕ ಸಾಧನೆಯು ಈ ಪ್ರದೇಶದಲ್ಲಿ ಒಂದು ಸವಾಲಾಗಿ ಪರಿಣಮಿಸಿದೆ..ಆದರೆ ಅವರು ನಾಯಕತ್ವ ತೋರಬಹುದಾದ ಕೆಲವು ವಿಭಾಗಗಳಿವೆ, ಉದಾಹರಣೆಗೆ, ಹಿಂದಿ ವಿಭಾಗ (ಅವರು ಹಿಂದಿಯಲ್ಲಿ ಆರಾಮವಾಗಿ ವ್ಯವಹರಿಸಬಲ್ಲರು) ಅಥವಾ ಸಾಂಸ್ಕೃತಿಕ ಚಟುವಟಿಕೆಗಳು (ಅವರು ಹಾಡು ಮತ್ತು ನೃತ್ಯಗಳಲ್ಲಿ ಆಸಕ್ತಿ ತೋರುತ್ತಾರೆ). ಆದರೆ ಅವರ ಶೈಕ್ಷಣಿಕ ಸಾಧನೆಯು ಅವರು ಆಯ್ಕೆಯಾಗುವ ಒಟ್ಟಾರೆ ಸಾಧ್ಯತೆಗೆ ಬಾಧಕವಾಗಿದ್ದರೆ, ಅವರ ಗೈರು ಹಾಜರಿಯು ಇದ್ದ ಅಲ್ಪ ಸಾಧ್ಯತೆಯನ್ನೂ ಶೂನ್ಯವಾಗಿಸಿಬಿಟ್ಟಿತು.

ಅವರೇಕೆ ಗೈರುಹಾಜರಾಗಿದ್ದಾರೆ ಹಾಗು ಸ್ವಚ್ಛತಾ ಕೆಲಸದಿಂದ ಅವರು ಸದಾ ಏಕೆ ತಪ್ಪಿಸಿಕೊಳ್ಳುತ್ತಾರೆ ಎಂಬುದನ್ನು ಅರ್ಥಮಾಡಿ–ಕೊಳ್ಳಲು ಪ್ರಯತ್ನಿಸಿದ ನನಗೆ ಒಟ್ಟಾರೆ ಶಾಲಾ ಹಂತದಲ್ಲಿ ಅವರ ಹಾಜರಿಯನ್ನು ಗಮನಿಸಬೇಕು ಎಂದು ಅನ್ನಿಸಿತು. ಆರಂಭಿಕ ಹಂತಗಳಿಂದಲೂ ತಾಂಡಾದ ಮಕ್ಕಳು ಕನ್ನಡ ಮಾತನಾಡುವ ಮಕ್ಕಳೊಂದಿಗೆ ಬೆರೆಯಲು ಪ್ರಯಾಸಪಡುತ್ತಾರೆ. ಅವರ ಪೋಷಕರ ಕಸುಬುಗಳಲ್ಲಿನ ಭಿನ್ನತೆಯ ಕಾರಣದಿಂದಾಗಿ ಕೆಲವು ಋತುಗಳಲ್ಲಿ (ಸುಗ್ಗಿ ಕಾಲದಲ್ಲಿ, ಹಬ್ಬಗಳಲ್ಲಿ, ಇತ್ಯಾದಿಗಳಲ್ಲಿ) ಅವರು ಗೈರುಹಾಜರಾಗುವುದು ಸಾಮಾನ್ಯವಾಗಿತ್ತು. ಅವರು ತಮ್ಮ ಕುಟುಂಬದವರೊಂದಿಗೆ ಕೆಲಸದ ನಿಮಿತ್ತ ದೊಡ್ಡ ನಗರಗಳಿಗೆ ಗುಳೇ ಹೋಗುವ ಸಮಯದಲ್ಲಿ ದೀರ್ಘಕಾಲ ಗೈರುಹಾಜರಾಗುವ ಸಂಭವ ಹೆಚ್ಚಾಗಿರುತ್ತಿತ್ತು. ಈ ನಗರಗಳಲ್ಲಿ ಅವರು ತಮ್ಮ ಕಲಿಕೆಯೂ ಸೇರಿದಂತೆ, ಕನ್ನಡ ವಾತಾವರಣವನ್ನು ಕಳೆದುಕೊಳ್ಳುತ್ತಾರೆ. ಶಾಲೆಗೆ ಮರಳಿದಾಗ ಭಾಷೆಗೆ ಸಂಬಂಧಿಸಿದಂತೆ ಅವರು ಎದುರಿಸುವ ತೊಡಕಿನಿಂದಾಗಿ ಸಹಪಾಠಿಗಳೊಡನೆ, ಶಿಕ್ಷಕರೊಡನೆ ಒಡನಾಡುವ ಸವಾಲು ಇನ್ನಷ್ಟು ಬಿಗಡಾಯಿಸಿರುತ್ತದೆ. ತಮ್ಮ ಸಹಪಾಠಿಗಳ ನಡುವೆ ಹೊಂದಾಣಿಕೆಯಾಗದೆ ಹೋಗುವುದು ಮಾಮೂಲಿನ ಸಂಗತಿಯಾಗಿ, ಈ ಮಕ್ಕಳು ಒಂದೇ ಸಮನೆ ತೆಗಳಿಕೆಗೆ ಗುರಿಯಾಗುವ ಆತಂಕದಲ್ಲಿ ಇರುವಂತಾಗುತ್ತದೆ.

ಗುರುತಿಸಿಕೊಳ್ಳುವಿಕೆಯ ಪ್ರಜ್ಞೆ

ಹೊಣೆಗಾರಿಕೆ ಎಂಬುದು ಗುರುತಿಸಿಕೊಳ್ಳುವಿಕೆಯ ಪ್ರಜ್ಞೆಯೊಂದಿಗೆ ನಿಕಟವಾದ ಸಂಬಂಧ ಹೊಂದಿದೆ. ಸಣ್ಣ ಮಕ್ಕಳ ವಿಷಯದಲ್ಲಾದರೂ, ಅವರು ಮೊದಲು ಗುರುತಿಸಿಕೊಳ್ಳುವ ಪ್ರಜ್ಞೆಯನ್ನು ಬೆಳೆಸಿಕೊಂಡ ನಂತರವೇ ಜವಾಬ್ದಾರಿಯನ್ನು ಸೇರಿಸಬಹುದು. ಇದರ ಉದಾಹರಣೆಯನ್ನು ನೀಲ್ ಅವರ ಸಮ್ಮರ್‌ಹಿಲ್ ಶಾಲೆಯ ವಿವರಣೆಯಲ್ಲಿ ಕಾಣಬಹುದು: ಕಿಟಕಿಯನ್ನು ಒಡೆದು ಹಾಕುತ್ತಿದ್ದ ಮಗುವೊಂದು ಅದನ್ನು ದುರ್ನಡತೆ ಎಂದಾಗಲೀ, ತಪ್ಪು ಎಂದಾಗಲೀ ಕಾಣಲು ನಿರಾಕರಿಸಿ, 'ಇವು ನನ್ನ ಕಿಟಕಿಗಳು' ಎಂದು ಹೇಳಿ, ತನ್ನಿಂದಾದ ನಷ್ಟವನ್ನು ತುಂಬಿ–ಕೊಡುವುದಾಗಿ ಹೇಳುತ್ತದೆ (ನೀಲ್, 1960). ಈ ಸನ್ನಿವೇಶದಲ್ಲಿ ಮಗುವಿನ ಗುರುತಿಸಿಕೊಳ್ಳುವಿಕೆಯ ಪ್ರಜ್ಞೆ ಮೊದಲು ಹೊಮ್ಮಿ, ತನ್ನ ವಯಸ್ಸಿನ ಕಾರಣದಿಂದಾಗಿ ಅದು ಒಡೆತನದ ಸ್ವಭಾವವನ್ನು ಹೊಂದಿದೆ. ತನ್ನ ನಡತೆಗೆ ಪಶ್ಚಾತ್ತಾಪಪಡುವಂತೆ ಮಾಡಲು ಅಥವಾ ತಾನು ಮಾಡಿದುದು ತಪ್ಪು ಎಂಬುದನ್ನು ಮಗು ಅರಿಯಲಾಗುವಂತೆ ಮಾಡಲು ಆಗದೇ ಇರುವುದಕ್ಕೆ ಕಾರಣ ಮಗುವಿನ ವಯಸ್ಸು. ಆದರೆ, ಮಗುವಿನಲ್ಲಿ ಜಾಗೃತವಾಗಿರುವ ಗುರುತಿಸಿಕೊಳ್ಳುವಿಕೆಯ ಪ್ರಜ್ಞೆ ತಾನು ಯಾವ ಕ್ರಿಯೆಗೆ ಹೊಣೆಗಾರನೋ ಅದನ್ನು ಅತ್ಯಂತ ಸಹಜ ರೀತಿಯಲ್ಲಿ ಒಪ್ಪಿಕೊಳ್ಳುವಂತೆ ಮಾಡುತ್ತದೆ.

ತಾಂಡಾ ವಿದ್ಯಾರ್ಥಿಗಳು ಶಾಲಾ ಸ್ವಚ್ಛತೆಯ ಕರ್ತವ್ಯದಿಂದ ಹಿಂದೆ ಸರಿಯಲು ಕಾರಣವೇನು ಎಂಬುದರ ಬಗ್ಗೆ ಚಿಂತಿಸುವಾಗ ನನಗೆ ಮೇಲೆ ಉಲ್ಲೇಖಿಸಿದ ಘಟನೆ ನೆನಪಾಯಿತು. ಶ್ರಮದಾಯಕವೆಂದು ತೋರುವಂತಹ ಕೆಲಸಗಳನ್ನು ಯಾವುದೇ ಮಗುವೂ ಖುಷಿಯಿಂದ ಮಾಡುವುದಿಲ್ಲ ಎಂಬುದು ಸಾಮಾನ್ಯ ಜ್ಞಾನ. ಮನೆಯಲ್ಲಾಗಲೀ, ಶಾಲೆಯಲ್ಲಾಗಲೀ ಅಂತಹ ಕೆಲಸ ಮಾಡಲು ಮಕ್ಕಳಿಗೆ ಬೇರೆಯೇ ಆದ ಪ್ರೇರಣೆ ಅಗತ್ಯವಾಗಿರುತ್ತದೆ. ಇದನ್ನೊಂದು ನಿಯಮವನ್ನಾಗಿಸಿ, ಬೆದರಿಕೆ ಒಡ್ಡಿ ಅಥವಾ ಇದನ್ನು ಮಾಡುವ ಅಗತ್ಯ ಇದೆ ಎಂದು ಮಕ್ಕಳು ನಂಬುವಂತೆ ಬಲವಂತ ಮಾಡಿ ಅವರಿಂದ ಇಂತಹ ಕೆಲಸಗಳನ್ನು ಮಾಡಿಸಬಹುದು. ಆದರೆ, ಮಕ್ಕಳು ಏನನ್ನಾದರೂ ಮಾಡಲು ಯಾವುದೇ ರೀತಿಯ ವೈಯಕ್ತಿಕ ಪ್ರೇರಣೆ ಇಲ್ಲದಿದ್ದಾಗ ಅವರು ಹೇಗೆ ಸ್ಪಂದಿಸುತ್ತಾರೆ ಎಂಬುದನ್ನು ತಾಂಡಾ ವಿದ್ಯಾರ್ಥಿಗಳ ಉದಾಹರಣೆ ತೋರಿಸುತ್ತದೆ. ವಿದ್ಯಾರ್ಥಿಗಳಿಗೆ ತಾವು ನಿಜವಾಗಿಯೂ ಆರರಿಂದ ಏಳು ವರ್ಷಗಳಿಂದಲೂ ಶಾಲೆಯ ಅಂಗವಾಗಿರುತ್ತೇವೆ ಎಂಬ ಭಾವನೆ ಮೂಡಿರದಿದ್ದಲ್ಲಿ ಅವರಿಗೆ ಶಾಲೆಯ ಆವರಣವನ್ನು ಸ್ವಚ್ಛಗೊಳಿಸು–ವಂತಹ ಕೆಲಸವನ್ನು ವಹಿಸಿದಾಗ ಅದಕ್ಕೆ ಹೊಣೆಗಾರರಾಗಲು ಹಿಂದೇಟು ಹಾಕುತ್ತಾರೆ. ಹೆಣ್ಣುಮಕ್ಕಳು ಆರು ವರ್ಷಗಳಿಂದಲೂ ಇದು ನಮ್ಮ ಶಾಲೆಯೆಂಬ ಭಾವವನ್ನು ಅನುಭವಿಸಿರದಿದ್ದರೆ,

ಹದಿಹರೆಯದ ಪ್ರಾಯವು ಮೇಲೆ ಹೇಳಿದಂತಹ ಭಾವನೆಯನ್ನು ಇನ್ನಷ್ಟು ತೀವ್ರಗೊಳಿಸಬಹುದು.

ಶಿಕ್ಷಕರ ಪೂರ್ವಗ್ರಹಗಳು

ಚುನಾವಣೆಯ ವಿಷಯಕ್ಕೆ ಬಂದರೆ, ಶಿಕ್ಷಕರಲ್ಲಿ ನಡುವೆ ಕಂಡುಬರುವ ಪೂರ್ವಗ್ರಹವನ್ನು ನಿರುತ್ಸಾಹಗೊಳಿಸಬೇಕಾದುದು ಅವಶ್ಯಕವಾದರೂ, ಅದು ಇರುವುದಂತೂ ಎಲ್ಲರಿಗೂ ತಿಳಿದ ಸಂಗತಿ. ಸರ್ಕಾರಿ ಶಾಲೆಯ ಮೆಟ್ಟಿಲು ತುಳಿದ, ಪಾಠಗಳಲ್ಲಿ ಮುಂದಿದ್ದ ಎಲ್ಲಾ ವಯಸ್ಕರೂ ಇದನ್ನು ರುಜುವಾತು ಮಾಡಬಲ್ಲರು. ತಾವು ಶಿಕ್ಷಕರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದೆ ಎಂದು ಹೇಳುವ ಅವರು, ತಾವು ವಿದ್ಯಾರ್ಥಿಗಳಾಗಿದ್ದಾಗ ಕೆಲವೇ ಕೆಲವು ಆಯ್ದ ವಿದ್ಯಾರ್ಥಿಗಳ ಕಡೆ ಗಮನ ಕೇಂದ್ರೀಕರಿಸಿದವರು ತಮ್ಮ ಶಾಲೆಯ ಅತ್ಯುತ್ತಮ ಶಿಕ್ಷಕರಾಗಿದ್ದರು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಶಿಕ್ಷಕರೂ ಇದನ್ನು ಒಪ್ಪಿಕೊಳ್ಳುತ್ತಾರೆ; ಕಲಿಯಲು ಇಚ್ಛೆ ತೋರುವವರನ್ನು ಗುರುತಿಸುತ್ತಿದ್ದಂತೆ ಅವರನ್ನು ಶಿಕ್ಷಕರು ತಮ್ಮ ಅಚ್ಚುಮೆಚ್ಚಿನವ-ರನ್ನಾಗಿ ಮಾಡಿಕೊಂಡು, ತಮ್ಮ ಎಲ್ಲಾ ಪ್ರಯತ್ನಗಳನ್ನೂ ಅವರ ಬೆಳವಣಿಗೆಯ ಕಡೆ ತಿರುಗಿಸುತ್ತಾರೆ.

ಶಾಲೆಯ ಸರ್ಕಾರವನ್ನು ಮಕ್ಕಳು ಶಾಲೆಯ ದಿನನಿತ್ಯದ ವ್ಯವಹಾರವನ್ನು ನೋಡಿಕೊಳ್ಳಲು ರಚಿಸಿರುತ್ತಾರೆ ಎಂಬುದನ್ನು ನಾವು ಮರೆಯಲಾಗದು. ನಾಯಕತ್ವವೆಂದರೆ ಎಲ್ಲಕ್ಕಿಂತ ಮಿಗಿಲಾಗಿ ಹೊಣೆಗಾರಿಕೆಯನ್ನು ಹೊರಲು ಮುಂದೆ ಬರುವುದು ಹಾಗು ಇತರರು ತಮಗೆ ವಹಿಸಲಾದ ಕರ್ತವ್ಯಗಳನ್ನು ನಿಭಾಯಿಸಲು ಆಗುವಂತೆ ಅವರಿಗೆ ಬೆಂಬಲವಾಗಿ ನಿಲ್ಲುವುದೇ ಆಗಿದೆ. ನಿರ್ಧಾರಗಳನ್ನು ಕೈಗೊಳ್ಳುವಾಗ ಸಾಮೂಹಿಕವಾಗಿ ಎಲ್ಲಾ ಮಕ್ಕಳ ಸಮ್ಮತಿಯನ್ನೂ ಆಧರಿಸಿರಬೇಕೇ ಹೊರತು ಯಾವ ಮಕ್ಕಳನ್ನು ಹೊರಗಿಡಬೇಕು ಎನ್ನುವ ಒಪ್ಪಿಗೆಯ ಮೇಲಲ್ಲ. ಮಕ್ಕಳಿಂದ, ಮಕ್ಕಳಿಗಾಗಿ ರಚಿತವಾಗಿರುವ ಮಕ್ಕಳ ಸರ್ಕಾರವು ವಿದ್ಯಾರ್ಥಿಗಳು ಶಿಕ್ಷಕರ ಜಾಗದಲ್ಲಿ ನಿಂತು ಇತರ ವಿದ್ಯಾರ್ಥಿಗಳು ಅಂಕೆ ಮೀರದಂತೆ ನೋಡಿಕೊಳ್ಳಲು ಇರುವುದಲ್ಲ, ಬದಲಿಗೆ, ವಿದ್ಯಾರ್ಥಿಗಳೇ ತಮ್ಮ ಕೆಲಸ, ಜವಾಬ್ದಾರಿಗಳನ್ನು 'ತಮ್ಮಷ್ಟಕ್ಕೇ ತಾವೇ ನಿಭಾಯಿಸಲು' ಸಾಧ್ಯವಾಗುವ ವಾತಾವರಣವೊಂದು ನಿರ್ಮಾಣವಾಗುವಂತೆ ನೋಡಿಕೊಳ್ಳಲು ಇದೆ ಎಂಬುದು ಮುಖ್ಯವಾದ ಸಂಗತಿ.

ತಾಂಡಾ ಮಕ್ಕಳು ಅಂದು ಶಾಲೆಯಲ್ಲಿ ಕಾಣದೇ ಹೋದಾಗ ತಮ್ಮ ಸಲುವಾಗಿಯೇ ತಾವು ಶಾಲಾ ಆವರಣವನ್ನು ಸ್ವಚ್ಛಗೊಳಿಸಬೇಕು ಎಂಬ ಭಾವನೆ ಅವರಲ್ಲಿ ಕಾಣದೇ ಹೋಗಿದ್ದುದನ್ನೂ ನಾನು ಗುರುತಿಸಿದೆ.

ಮಕ್ಕಳಿಂದ ನಿಯಮಗಳ ರಚನೆ

ಶಾಲೆಯ ಹಂತದಲ್ಲಿ ನಾನು ಹೆಚ್ಚಿನದೇನನ್ನೂ ಮಾಡಲಾಗದಿದ್ದರೂ, ತಾವೇ ರಚಿಸಿಕೊಂಡ ಆಡಳಿತ ವ್ಯವಸ್ಥೆಯ ವಿಚಾರವಾಗಿ ಮಕ್ಕಳು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ನನಗೆ ತಿಳಿಯುವ ಬಯಕೆಯಿತ್ತು. ಐದನೇ ತರಗತಿಯ ನನ್ನ ವಿದ್ಯಾರ್ಥಿಗಳು ಗಲಾಟೆ ಮಾಡುತ್ತಿದ್ದಾಗ ನಾನು ಓದುತ್ತಿದ್ದ ಕಥೆ ಪುಸ್ತಕವನ್ನು ಮುಚ್ಚುವುದನ್ನು ಕಂಡ ಅವರು ಮೊದಲು ತಮಗೆ ತಾವೇ 'ಶ್' ಎನ್ನುತ್ತಾ ಮಲಗಿರುವಂತೆ ಸೂಚಿಸಿಕೊಂಡರಾದರೂ, ಬಳಿಕ, ಇನ್ನೂ ಹೆಚ್ಚಿನ ಗದ್ದಲ ಹಾಗು ಪರಸ್ಪರ ಆಕ್ಷೇಪಗಳ ಮಳೆಗರೆಯಲು ಶುರುಮಾಡಿದರು. ವಾರಕ್ಕೆ ಒಂದು ಕಥೆಯನ್ನು ಮುಗಿಸಲು ಸಾಧ್ಯವಾಗುವಂತೆ ನಿಮ್ಮದೇ ಆದ ಒಂದು ನಿಯಮವನ್ನು ರೂಪಿಸಿಕೊಳ್ಳಿ ಎಂದು ನಾನು ಅವರಿಗೆ ಹೇಳಿದಾಗ (ಅವರ ಕಡೆಯಿಂದ ಯಾವುದೇ ಅಡೆತಡೆ ಇಲ್ಲದಿದ್ದರೆ ಮಾತ್ರ ಇದು ಸುಸೂತ್ರವಾಗಿ ಜರುಗಲು ಸಾಧ್ಯವಿತ್ತು ಎಂಬ ಸೂಚನೆ ಅದರಲ್ಲಿ ಸೇರಿತ್ತು.) ಅವರು ಅತ್ಯಂತ ವ್ಯಾಪಕ ನಿಯಮಗಳ ಪಟ್ಟಿಯನ್ನೇ ನನ್ನ ಎದುರು ಇಟ್ಟರು (ಜಗಳಗಳನ್ನು ತಪ್ಪಿಸಲು ಯಾರು ಯಾರೊಡನೆ ಕುಳಿತುಕೊಳ್ಳಕೂಡದು ಎಂಬುದನ್ನೂ ಒಳಗೊಂಡಿತ್ತು!). ಇದನ್ನೇ ಮಾಡಲು ನಾನು ಆರು ಮತ್ತು ಏಳನೇ ತರಗತಿಯ ಮಕ್ಕಳೊಡನೆಯೂ ಪ್ರಯತ್ನಿಸಿದಾಗ, ಅದು ಯಶಸ್ವಿಯಾಗಿ ನೆರವೇರಿತು.

ಈ ನಿಯಮುಗಳು ತರಗತಿಯಲ್ಲಿ ಒಂದು ಕರಾರುವಾಕ್ಕಾದ ವಾತಾವರಣವನ್ನು ಏರ್ಪಡಿಸುವ ಭರವಸೆಯನ್ನೇನೂ ನೀಡಲಿಲ್ಲ. ಆದರೆ, ಸಮಸ್ಯೆ ತಲೆದೋರಿದಾಗ ಮಕ್ಕಳಿಗೆ ಎಲ್ಲಿ, ಏನು ತಪ್ಪಾಗಿದೆ ಎಂದು ತಿಳಿದು ಅದನ್ನು ತಾವು ಹೇಗೆ ಸರಿಪಡಿಸಬಹುದೆಂದು ತೋರುತ್ತಿದ್ದುದರಿಂದ ಈ ಪ್ರಕ್ರಿಯೆಯು ಯಶಸ್ಸು ಕಾಣುವಂತಾಯಿತು. ಅಂದರೆ, ಬೇರೆಯೇ ಆದ ರೀತಿಗಳಲ್ಲಿ ಸಮಸ್ಯೆಗಳು ನಿರ್ವಹಿಸಬೇಕಾದ ಸಂದರ್ಭಗಳೇ ಇರಲಿಲ್ಲವೆಂದಲ್ಲ. ವಿದ್ಯಾರ್ಥಿಗಳು ಕೆಲವು ನಿರ್ದಿಷ್ಟ ಸಮಸ್ಯೆಗಳನ್ನು ನನ್ನ ಗಮನಕ್ಕೆ ತರದಿದ್ದ ಸಂದರ್ಭಗಳೂ ಇದ್ದವು; ನಾನು ಅವುಗಳನ್ನು ಬಗೆಹರಿಸುವ ವಿಧಾನ ಫಲಕಾರಿಯಾಗದು ಎಂದು ಅವರಿಗೆ ಅನಿಸಿದ್ದು ಇದಕ್ಕೆ ಕಾರಣವಾಗಿತ್ತು. ನಾನು ಈ ಶಾಲೆಯೊಂದಿಗೆ ಕಳೆದ ಅಲ್ಪಕಾಲಿಕ ಅವಧಿಯಲ್ಲಿ ಮಕ್ಕಳಿಂದ ರಚಿತವಾದ ಆಡಳಿತ ಯಂತ್ರ ಕೆಲಸ ಮಾಡಬಲ್ಲದು ಎಂದು ಹೇಳಲು ಸಾಧ್ಯವಾಯಿತು. ನನ್ನ (ಸಣ್ಣ ಪ್ರಮಾಣದ) ಪ್ರಯತ್ನದಲ್ಲಿ ಎಲ್ಲಾ ಮಕ್ಕಳ ಸೇರ್ಪಡೆಯನ್ನೂ ಆದ್ಯತೆಯನ್ನಾಗಿಸಿದ್ದೆ ಮಾತ್ರವಲ್ಲ, ಮಕ್ಕಳು ರಚಿಸಿಕೊಂಡ ನಿಯಮಗಳು ನೇರವಾಗಿ ಅವರ ನಡತೆಗಳಿಗೆ ಸಂಬಂಧಿಸಿದ್ದರಿಂದ ಎಲ್ಲಾ ಮಕ್ಕಳನ್ನೂ ಈ ಪ್ರಕ್ರಿಯೆಯಲ್ಲಿ ಒಳಗೊಳ್ಳಲು ನನಗೆ ಸಾಧ್ಯವಾಗಿತ್ತು. ಅವರ ನಡುವೆ ನಡೆಯುತ್ತಿದ್ದ ಗದ್ದಲ, ಜಗಳ ಹಾಗು ಚಡಪಡಿಕೆಗಳ. ಸಂದರ್ಭದಲ್ಲಿ ಅವರೇ ಆಯ್ಕೆ ಮಾಡಿದ ಕಥೆಯೊಂದನ್ನು ನಿರೂಪಿಸಲಾಯಿತು. ನನ್ನದು ಎಂಬ ಭಾವನೆಯನ್ನು ಉಂಟುಮಾಡಿ ಹೊಣೆಗಾರಿಕೆಯ ಭಾವವನ್ನು ಸ್ಥಾಪಿಸುವುದು (ಸುಲಭವಿರದಿದ್ದರೂ) ಸರಳವಾಗಿ ಸಾಧ್ಯವಾಗಿತ್ತು. ಇದನ್ನು ನಾನು ಐದರಿಂದ ಏಳನೇ ತರಗತಿಯ ಮಕ್ಕಳ ಹಂತದಲ್ಲಿ ಮಾತ್ರ ಸಾಧಿಸಲು ಸಾಧ್ಯವಾಯಿತು. 'ನಲಿ-ಕಲಿ' ಮಕ್ಕಳ ಹಂತದಲ್ಲಿ ನಿಯಮಗಳನ್ನು, ಅವುಗಳನ್ನು ಯಾರೇ ಮಾಡಿರಲಿ, ಮಕ್ಕಳು ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆಂದು ನಿರೀಕ್ಷಿಸಲಾಗದು. ನಿನ್ನೆ ಅವರು ಅವುಗಳನ್ನು ಒಪ್ಪಿಕೊಂಡಿದ್ದರೂ, ತಮ್ಮ ಆಟದ ಗದ್ದಲದಲ್ಲಿ ಮರುದಿನ ಅವನ್ನು ಮರೆಯುವ ಸಾಧ್ಯತೆಗಳೇ ಹೆಚ್ಚು. ಆದರೆ ಪ್ರತಿ ತರಗತಿಯಲ್ಲೂ ನಾವು ಕೆಲವು ಸಣ್ಣ-ಪುಟ್ಟ (ಕಥೆ ಕೇಳುವಾಗ ಅರ್ಧವೃತ್ತಾಕಾರದಲ್ಲಿ ಮಾತ್ರ ಕುಳಿತುಕೊಳ್ಳಬೇಕು ಎಂಬಂತಹ) ನಿಯಮಗಳನ್ನು ಪಾಲಿಸುತ್ತಿದ್ದೆವು. ಇದು ತರಗತಿಗಳಿಗೆ ಸಂರಚನೆ ಹಾಗು ಸುಸಂಗತತೆಯನ್ನು ಒದಗಿಸಿತ್ತು.


ನಾನು ಅರ್ಥಮಾಡಿಕೊಂಡಿರುವಂತೆ, ನಮ್ಮ ಸರ್ಕಾರಿ ಶಾಲೆಗಳಲ್ಲಿ ಪೌರತ್ವ ಶಿಕ್ಷಣವು ನಾಲ್ಕು ಮುಖ್ಯ ಸಂಗತಿಗಳ ಸುತ್ತ ಹೆಣೆದುಕೊಂಡಿದೆ: ಮೊದಲಿಗೆ, ಮಕ್ಕಳು ತಾವು ಶಾಲೆಯ ಪ್ರಜೆಗಳು ಎಂಬ ಭಾವನೆ ಬಲಿಯುವಂತಹ ವಾತಾವರಣದ ಅವಶ್ಯಕತೆ; ಎರಡನೆಯದು, ಶಾಲೆಯ ಪ್ರತಿ ಸದಸ್ಯನಿಗೂ ಒಂದಷ್ಟು ನಿಗದಿಪಡಿಸಲಾದ ಹಕ್ಕುಗಳಿರುವ ಕಾರಣದಿಂದ ಈ ವಾತಾವರಣವು ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು ಮಕ್ಕಳು ಅರ್ಥಮಾಡಿಕೊಳ್ಳುವುದು; ಮೂರನೆಯದು, ಈ ಹಕ್ಕುಗಳು

ಸಕ್ರಿಯವಾಗುವಂತಹ ಪ್ರಕ್ರಿಯೆಗಳಾದ ಪಾಲನೆ, ಸಮರ್ಥನೆ ಹಾಗು ಅನುಷ್ಠಾನಗಳಲ್ಲಿ ಮಕ್ಕಳು ತಮ್ಮನ್ನು ತೊಡಗಿಸಿ-ಕೊಳ್ಳುವುದು; ಕೊನೆಯದಾಗಿ, ಪ್ರಜಾಪ್ರಭುತ್ವದ ಪರಿಕಲ್ಪನೆ-ಯನ್ನು ಅವರ ಚೌಕಟ್ಟಿಗೆ ಹೇಗೆ ಅಳವಡಿಸಲಾಗಿದೆ ಎಂಬುದರ ಅರಿವನ್ನು ಅವರ ಔಪಚಾರಿಕ ಕಲಿಕಾ ಪ್ರಕ್ರಿಯೆಗೆ (ಅವರು ತಮ್ಮ ಒದಗಿಸಿತ್ತು. ಪೌರನೀತಿ ಪಾಠಗಳಲ್ಲಿ ಭಾರತದ ಪ್ರಜಾಪ್ರಭುತ್ವದ ವಿಷಯವನ್ನು ಕಲಿಯುವಾಗ ಆಗುವಂತೆ) ತಳುಕು ಹಾಕುವುದು.

ಜವಾಬ್ದಾರಿಯುತ ಪ್ರಜೆಗಳನ್ನು ಅಥವಾ ಜವಾಬ್ದಾರಿಯುತ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಆಲೋಚನೆಯು ಒಂದು ಸಂಕೀರ್ಣ ಸಮಸ್ಯೆಯಾಗಿ ಕಂಡು ನಾವು ಧೈರ್ಯಗೆಡಿಸುವಂತಿದ್ದರೂ ಪ್ರತಿ ಮಗುವೂ ಶಾಲೆಯು ತನ್ನದೆಂದು ಗುರುತಿಸಿಕೊಳ್ಳುವಂತೆ ಮಾಡುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ಈ ಶಾಲೆ ನಮ್ಮದೆಂದು ಭಾವಿಸುವ ಪ್ರಜೆಗಳ ಸೃಷ್ಟಿಯಲ್ಲಿ ಭಾಗವಹಿಸುವುದು ಉತ್ತಮ ಆರಂಭ ಮತ್ತು ನನ್ನ ಅಲ್ಪಕಾಲಿಕ ಅನುಭವದಲ್ಲಿ ಇದನ್ನು ನೋಡುವುದು ಕೂಡ ಅದ್ಭುತವಾದುದು!

i. ತೋತ್ತೋ ಚಾನ್, "ದ ಲಿಟಲ್ ಗರ್ಲ್ ಎಟ್ ದ ವಿಂಡೋ" (1981) ಎಂಬುದು ಜಪಾನಿನ ದೂರದರ್ಶನ ಕಲಾವಿದೆ ಹಾಗು ಯೂನಿಸೆಫ್ ಸದ್ಭಾವನಾ ರಾಯಭಾರಿಯಾದ ತೆತ್ಸುಕೋ ಕುರೊಯಾನಗಿ ಅವರ ಆತ್ಮಕಥನವಾಗಿದೆ.

ii. ಸಮ್ಮರ್ ಹಿಲ್ ಎಂಬುದು ಇಂಗ್ಲೆಂಡಿನ ಲೆಸ್ಟೋನ್‌ನ ಸಫೋಕ್‌ನಲ್ಲಿ ಇರುವ ಒಂದು ಸ್ವತಂತ್ರ ವಸತಿ ಶಾಲೆಯಾಗಿದೆ. ಈ ಶಾಲೆಯನ್ನು ಅಲೆಕ್ಸಾಂಡರ್ ಸದರ್‌ಲ್ಯಾಂಡ್ ನೀಲ್ ಅವರು, 'ಮಗುವಿಗೆ ತಕ್ಕ ಹಾಗೆ ಶಾಲೆಯನ್ನು ರೂಪಿಸಬೇಕೇ ಹೊರತು ಶಾಲೆಗೆ ತಕ್ಕ ಹಾಗೆ ಮಗುವನ್ನಲ್ಲ' ಎಂಬ ಅಚಲ ನಂಬುಗೆಯೊಂದಿಗೆ 1921ರಲ್ಲಿ ಆರಂಭಿಸಿದರು.



ಅರ್ಚನಾ ಆರ್. ಅವರು ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಕರ್ನಾಟಕದ ಯಾದಗಿರಿಯಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಇಂಗ್ಲಿಷ್ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಅವರು ಕಥೆ–ಕಾದಂಬರಿಗಳನ್ನು ಓದುವುದರಲ್ಲಿ ಹಾಗು ಮಕ್ಕಳಿಗೆ ಓದಲು ರೋಚಕ ಪುಸ್ತಕಗಳ ಹುಡುಕಾಟದಲ್ಲಿ ಒಲವು ತೋರುತ್ತಾರೆ. ಅವರನ್ನು ಸಂಪರ್ಕಿಸಬಹುದಾದ ಮಿಂಚಂಚೆ ವಿಳಾಸ: archana.r@azimpremjifoundation.org

ಅನುವಾದ: **ಕುಶಾಲ್** । ಪರಿಶೀಲನೆ: **ಲತಾ ಕೆ.ಸಿ.**